ಅಸಲು ದಾವೆ ಸಂಃ 71/2013
ಡಿ.ಡಬ್ಲ್ಯೂ೪1

ಈ ದಿನ ದಿನಾಂಕಃ 25-05-2023 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಶ್ರೀಃ ವೈ.ಎಂ.ಆರ್ . ವಕೀಲರಿಂದಃ

ದಿಃ 09-01-2013 ರಂದು ವಾದಿ ದಾವಾ ಆಸ್ತಿಯ ಹದ್ದುಬಸ್ತನ್ನು ಮಾಡಿಸಲು ಸರ್ವೆಯರಿಗೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ನನಗೆ ಸರ್ವೆಯರ್ ಇಲಾಖೆಯಿಂದ ನೋಟಿಸು ನೀಡಿದ್ದರು ಎಂದರೆ ಸರಿ . ಸದರಿ ನೋಟಿಸಿನಲ್ಲಿ ದಿನಾಂಕಃ 15-07-2015 ರಂದು ಸ್ಥಳ ಪರೀವೀಕ್ಷಣೆ ಮಾಡಲು ಮತ್ತು ಹದ್ದುಬಸ್ತು ಮಾಡಲು ಇಲಾಖಾವತಿಯಿಂದ ಸರ್ವೆಯರ್ ಬರುತ್ತಾರೆ ಎಂದು ನಮೂದುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಈ ವಿಚಾರ ನನ್ನ ತಂದೆಯವರಿಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ . ಸದರಿ ದಾವೆಗೆ ನನ್ನ ತಂದೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ ,ಅಳತೆ ಮಾಡಲು ಬಂದು ಇಲಾಖಾ ಅಧಿಕಾರಿಗಳಿಗೆ ನಾನು ಆ ದಿನ ಅಡ್ಡಿಪಡಿಸಿರುತ್ತೇನೆ ಎಂದರೆ ಸಾಕ್ಷಿಯು ಈ ವಿಚಾರ ನನ್ನ ತಂದೆಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ . ಪ್ರಧಾನ ದಿವಾಣಿ ನ್ಯಾಯಾಲಯದಲ್ಲಿ ನಡೆದ ದಾವೆಯಲ್ಲಿ ನನ್ನ ತಂದೆಯ ಪರವಾಗಿ ನಾನು ಮುಕ್ತಿಯಾರ್ ನಾಮೆಯನ್ನು ಪಡೆದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ .

ದಿಃ 15-07-2015 ರಂದು ಅಳತೆ ಮಾಡಲು ಬಂದ ಇಲಾಖಾ ಅಧಿಕಾರಿಗಳ ಬಳಿ ನಾನು ದಿನಾಂಕಃ 25-07-2015 ರವರೆಗೆ ಸಮಯವನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನಮ್ಮ ವಕೀಲರ ಮುಖಾಂತರ ಸರ್ವೆಯರ್ ಗೆ ಲೀಗಲ್ ನೋಟೀಸನ್ನು ಕಳುಹಿಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ವಿಚಾರ ನನ್ನ ತಂದೆಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನೋಟೀಸನ್ನು ನಾನೇ ದಿನಾಂಕಃ 17-07-2015 ರಂದು ಕಳುಹಿಸಿರುತ್ತೇನೆ ಎಂದರೆ ನನಗೆ ನೆನಪಿರುವುದಿಲ್ಲ . ಸದರಿ ನೋಟೀಸಿನಲ್ಲಿ ಬರೆದಿರುವ ವಿಚಾರಗಳು ನನಗೆ ನೆನಪಿರುವುದಿಲ್ಲ . ನಾನು ಸರ್ವೆಯರ್ ಜೊತೆ ಶಾಮೀಲಾಗಿ ವಾದಿಯೇ ದಾವಾ ಆಸ್ತಿಯಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ದಿಃ 15-07-2015 ರಿಂದ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-6.pdf
www.ecourtsindia.com

ಇಲ್ಲಿಯವರೆಗೆ ದಾವಾ ಆಸ್ತಿಗಳಿಗೆ ನಾನು ಹದ್ದುಬಸ್ತು ಮಾಡಲು ಬಿಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಅಳತೆ ಮಾಡಿಕೊಂಡು ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ . ಯಾವ ದಿನಾಂಕ ಹದ್ದುಬಸ್ತು ಮಾಡಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು 2019 ರಲ್ಲಿ ವಾದಿಯ ಅರ್ಜಿಯ ಮೇರೆಗೆ ಸರ್ವೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. 2017 ರ ನಂತರ ನ್ಯಾಯಾಲಯದ ಆದೇಶಕ್ಕೆ ಮೇರೆಗೆ ಸರ್ವೆ ಇಲಾಖೆಯಿಂದ ಅಧಿಕಾರಿಗಳು ಹದ್ದುಬಸ್ತು ಮಾಡಲು ದಾವಾ ಆಸ್ತಿಗಳಿಗೆ ಬಂದಿರುವುದಿಲ್ಲ.

ನಿ ಡಿ 16 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ , ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ತಿಳಿದಿರುತ್ತದೆ ಎಂದು ನುಡಿದಿರುತ್ತಾರೆ . ದಿನಾಂಕಃ 19-11-2018 ರಂದು ದಾವಾ ಆಸ್ತಿಗಳ ಅಳತೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ . ದಿನಾಂಕಃ 19-11-2018 ರ ಕೊರ್ಟ್ ಕಮಿಷನರ್ ವರದಿಯ ಪ್ರಕಾರ ನಾನು 2 ಗುಂಟೆ (ಬಿ ಷೆಡ್ಯೂಲ್) ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ವಾದಿಗಳು ಮೇಲೆ ಹೇಳಿದ ಎರಡು ಗುಂಟೆ (ಬಿ ಷೆಡ್ಯೂಲ್)ಒತ್ತುವರಿ ಜಮೀನಿಗಾಗಿ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ . ಒತ್ತುವರಿ ಮಾಡಿರುವ ಜಮೀನನ್ನು ವಾದಿಗಳಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ನಾನು ನನಗೆ ಏನೂ ಗೊತ್ತಿರುವುದಿಲ್ಲ, ನನ್ನ ತಂದೆಗೆ ವಿಚಾರಗಳು ತಿಳಿದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ 2019 ರಲ್ಲಿ ಮರಣ ಹೊಂದಿರುತ್ತಾರೆ , ದಿನ ಮತ್ತು ತಿಂಗಳು ನನಗೆ ನೆನಪಿರುವುದಿಲ್ಲ . ನನ್ನ ತಂದೆಗೆ ನಾನೇ ಹಿರಿಯ ಮಗ ಎಂದರೆ ಸರಿ . ಈ ದಾವೆಯಲ್ಲಿ ನನ್ನ ತಂದೆಯ ಮರಣಾನಂತರ ನಾನೇ ನಡೆಸುಕೊಂಡು ಬರುತ್ತಿದ್ದೇನೆ ಎಂದರೆ ಸಾಕ್ಷಿಯು 2020 ರಿಂದ ನನಗೆ ನೆನಪಿನ ಸಮಸ್ಯೆ ಇರುವುದರಿಂದ ನನ್ನ ತಮ್ಮನೊಂದಿಗೆ ನಡೆಸುಕೊಂಡು ಬಂದಿರುತ್ತೇನೆ ಎಂದು ನುಡಿಯುತ್ತಾರೆ . ದಿಃ 08-11-2021 ರ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಯಿಸಿರುತ್ತೇನೆ . ಸದರಿ ಸಮಯದಲ್ಲಿ ನನಗೆ ನೆನಪಿನ ಸಮಸ್ಯೆ ಇರುವ ಬಗ್ಗೆ ನಮ್ಮ ವಕೀಲರಿಗೆ ನಾನು ತಿಳಿಸಿರುವುದಿಲ್ಲ ಹಾಗೂ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-6.pdf

ಅಸಲು ದಾವೆ ಸಂಃ 71/2013
ಡಿ.ಡಬ್ಲ್ಯೂಃ1

ನಾನು ಭೂ ಪರಿವರ್ತನೆ ಮಾಡಿಸಿದ ಆಸ್ತಿಯ ಚಕ್ಕುಬಂಧಿಯನ್ನು ನ್ಯಾಯಾಲಯಕ್ಕೆ ನೀಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ . ನಿ ಡಿ 18 ರಲ್ಲಿ ಸರ್ವೆ ನಂಃ 40/1 ಪಿ ಆಸ್ತಿಗೆ ಸಂಬಂಧಪಟ್ಟ ಚಕ್ಕುಬಂಧಿಗಳು ನಮೂದುಪಡಿಸಿರುವುದಿಲ್ಲ ಎಂದರೆ ಸರಿ . ನಿ ಡಿ 19 ರಲ್ಲಿ ಚಕ್ಕುಬಂಧಿಗಳು ನಮೂದು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಿಡಿ 1 ರಿಂದ 19 ರವರೆಗಿನ ದಾಖಲೆಗಳನ್ನು ವಕೀಲರಿಗೆ ನಾನೇ ನೀಡಿರುತ್ತೇನೆ ಎಂದರೆ ಸರಿ . ನಿಡಿ 1 ರಿಂದ 19 ರವರೆಗಿನ ದಾಖಲೆಗಳಲ್ಲಿ ಇರುವ ವಿಚಾರ ನನಗೆ ತಿಳಿದೇ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನನಗೆ ದಾಖಲೆಗಳನ್ನು ತರಲು ಹೇಳಿದ್ದು ನಾನು ತಂದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ . ನಿ ಡಿ 11 ರಲ್ಲಿರುವ ದಾಖಲೆ ಯನ್ನು ಸಾಕ್ಷಿಗೆ ತೋರಿಸಿದಾಗ ಅದು ಯಾವುದು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ , ಸಾಕ್ಷಿಯು ಮುಂದುವರೆದು ಆದರೆ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ . ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ನನ್ನ ಜಮೀನನ್ನು ಹೊರತುಪಡಿಸಿ ಬೇರೆ ಯಾವ ಜಮೀನು ಇರುವುದಿಲ್ಲ ಎಂದರೆ ಸರಿ. ವಾದಿಯರು ದೌರ್ಬಲ್ಯದವರಾದ್ದರಿಂದ ಅವರ ಒತ್ತುವರಿ ಮಾಡಿದ ಜಮೀನನ್ನು ಬಿಟ್ಟು ಕೊಡದ ಕಾರಣ ವಾದಿಗಳು ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ .

ಮರುವಿಚಾರಣೆ ಇರುವುದಿಲ್ಲ **.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-6.pdf